ಆಗಲಾರದೆನ್ನುವುದನ್ನು ನಾನು ಅನುದಾನ ಬೇಡಿಕೆಗಳ ಚರ್ಚೆಯಲ್ಲಿ ಹೇಳುತ್ತೇನೆ.

(ತಡೆಹಿಡಿಯಲಾದ ಪ್ರಶ್ನೆ)

ತುಮಕೂರು ಜಿಲ್ಲೆಯಲ್ಲಿ ಅನಧಿಕೃತ ಸಾಗುವಳಿ ಕುರಿತು

246 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆಯಾದ್ಯಂತ ಮತ್ತು ಕಳ್ಳಂಬೆಳ್ಳ ಕ್ಷೇತ್ರ ವ್ಯಾಪ್ತಿಯಲ್ಲಿ ಅಬಕಾರಿ ಇಲಾಖೆಗೆ ಸೇರಿದ ಜಮೀನಿನಲ್ಲಿ ಅಕ್ರಮವಾಗಿ ಜನರು ಅನೇಕ ವರ್ಷದಿಂದ ಸಾಗುವಳಿ ಮಾಡುತ್ತಿದ್ದು ಇದುವರೆಗೂ ಸಕ್ರಮ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಸಾಗುವಳಿ ಮಾಡುತ್ತಿರುವ ಜಮೀನಿನ ವಿಸ್ತೀರ್ಣದ ವಿವರವನ್ನು ನೀಡುವುದು)

ಆ) ಬಂದಿದ್ದಲ್ಲಿ ಸದರಿ ಜಮೀನನ್ನು ಶೀಂದಿವನದಿಂದ ಬಿಡುಗಡೆ ಮಾಡಿ ಕಂದಾಯ ಇಲಾಖೆಯ ಮುಖಾಂತರ ಸಕ್ರಮ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಹೌದು

ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಜನರ ಸಂಖ್ಯೆ		ಕ್ಷೇತ್ರ
1) ಕಳ್ಳಂಬೆಳ್ಳ ಕ್ಷೇತ್ರ	3374	8167 - 23
2) ತುಮಕೂರು ಜಿಲ್ಲೆಯಲ್ಲಿ	7561	21526-00
ಒಟ್ಟು		

ಆ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವಾಗಿ ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ 3374 ಜನರು ಸಾಗುವಳಿ ಮಾಡುತ್ತಿದ್ದಾರೆ. ಅನಧಿಕೃತವಾಗಿ 8167ಎಕರೆಗಳ ವ್ಯಾಪ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆನ್ನುವಂತಹ ಮಾತನ್ನು ಹೇಳಿದ್ದಾರೆ. ಈಗ ಸರ್ಕಾರದ ಪರಿಶೀಲನೆಯಲ್ಲಿ ಕೂಡ ಇದೆ. ಇದನ್ನು ಬಿಡುಗಡೆ ಮಾಡುವಂಥಾದ್ದಕ್ಕೆ ಕೂಡ ಹೇಳಿದ್ದಾರೆ. ದಯಮಾಡಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅತ್ಯಂತ ವಿನಯಪೂರ್ವಕವಾಗಿ ಸಾಗುವಳಿದಾರರ ಪರವಾಗಿ ವಿನಂತಿ

ಮಾಡುತ್ತೇನೆ. ಈ ವಿಷಯ 5-6 ಸಾರಿ ವಿಧಾನಸಭೆಯಲ್ಲಿ ಬಂದಿರುವಂಥಾದ್ದು, ಪ್ರತಿ ಸಂದರ್ಭದಲ್ಲೂ ಕೂಡ ಸರ್ಕಾರದಿಂದ ಪರಿಶೀಲನೆಯಲ್ಲಿದೆ, ಎಂಬ ಉತ್ತರ ಬರುತ್ತದೆ. ನನಗೆ ಬಂದಿರತಕ್ಕಂತಹ ಮಾಹಿತಿ ಪ್ರಕಾರ ಈಗಾಗಲೇ ಈ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯಾಗಿ 2-3 ವರ್ಷಗಳಾಗಿದೆ. ಆದರೆ ಕಳೆದ 2-3 ವರ್ಷಗಳಿಂದಲೂ ಈ ಬಗ್ಗೆ ಉಪ-ಸಮಿತಿಯು ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲ. ಈಗಾಗಲೇ ಅದು ನಿಮ್ಮ ಇಲಾಖೆಯ ವ್ಯಾಪ್ತಿಯಲ್ಲಿ ಇಲ್ಲ. ಈಗಾಗಲೇ ಅಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿ ತೆಂಗಿನ ಮರ ಬೆಳೆಸಿದ್ದಾರೆ. ಅದು ಸುಮಾರು 20-30 ವರ್ಷಗಳಿಂದ ನಡೆಸಲು ಬಿಡುತ್ತಿದೆ. ಈಗ ನಾವು ಬಗರ್ ಹುಕುಂ ಸಮಿತಿ ಮುಂದೆ ಒಂದು ಅರ್ಜಿ ಹಾಕಿದರೆ ಅವರಿಗೆ ಮಂಜೂರು ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಒಂದು ಎಕರೆಯನ್ನು ಅಥವಾ ಒಂದು ಗುಂಟೆಯನ್ನೂ ಕೂಡ ಬಿಡುಗಡೆ ಮಾಡುವುದಕ್ಕೆ ಎಕ್ಸ್ಪೈಜ್ ಡಿಪಾರ್ಟ್ಮೆಂಟ್ ಒಪ್ಪುತ್ತಿಲ್ಲ. ಇಂತಹ ಸಂದರ್ಭದಲ್ಲಿ ಜಮೀನನ್ನು ಉಳಿಸಿಕೊಳ್ಳುವುದಕ್ಕಾಗುವುದಿಲ್ಲ. ಜೊತೆಗೆ ಮಾಲೀಕತ್ವವೂ ಕೂಡ ಅವರಿಗೆ ಕೊಡದಿದ್ದರೆ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ದಯಮಾಡಿ ತಾವು ಜಮೀನನ್ನು ಬಿಡುಗಡೆ ಮಾಡಿಸಬೇಕು. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಎಂದು ಉತ್ತರ ಕೊಟ್ಟಿದ್ದೀರಿ, ಆದರೆ ಎಂದು ಬಿಡುಗಡೆ ಮಾಡುತ್ತೀರಿ ಎಂಬ ಬಗ್ಗೆ ಒಂದು ನಿರ್ದಿಷ್ಟವಾದ ದಿನಾಂಕವನ್ನು ಹೇಳಿದರೆ ಸೂಕ್ತವಾಗುತ್ತದೆ. ತಾವು ಈ ಸಂದರ್ಭದಲ್ಲಿ ಜನಗಳಿಗೆ ಒಂದು ಮೆಸೇಜ್ ಅನ್ನು ತಮ್ಮ ಉತ್ತರದಲ್ಲಿ ಕೊಡಬೇಕಾಗುತ್ತದೆ. ನೀವು ಇದರ ಬಗ್ಗೆ ಯಾವತ್ತಾದರೂ ತೀರ್ಮಾನ ಮಾಡಿ. ಆದರೆ ನಿಮ್ಮನ್ನು ಯಾವ ರೀತಿಯಾಗಿಯೂ ಎಕ್ಕಲೆಬ್ಬಿಸುವುದಿಲ್ಲ, ನಿಮಗೆ ಮಾನ್ಯತೆ ಮಾಡುತ್ತೇವೆ, ಜಮೀನು ಮಂಜೂರು ಮಾಡುತ್ತೇವೆ, ಅದು ನಮ್ಮ ಸರ್ಕಾರದ ಉದ್ದೇಶ ಎಂಬ ಮಾತು ತಮ್ಮ ಉತ್ತರದಲ್ಲಿ ಬಂದರೆ ಅದು ಅಲ್ಲಿನ ಜನರಿಗೆ ಒಳ್ಳೆಯ ಮೆಸೇಜ್ ಆಗುತ್ತದೆ ಆದ್ದರಿಂದ ಈ ಮಾತನ್ನು ತಾವು ಹೇಳಬೇಕೆಂದು ನಾನು ನಿರೀಕ್ಷಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಈ ಅಬ್ಯಾರಿ ಜಮೀನು ಎಂದು ಇದನ್ನು ಏನು ಕರೆಯುತ್ತೇವೆ, ಇದು ರಾಜ್ಯಾದ್ಯಂತ ಒಂದು ದೊಡ್ಡ ಸಮಸ್ಯೆಯಾಗಿದೆ. ಆ ಜಮೀನುಗಳಲ್ಲಿ ಹಿಂದೆ ಇದ್ದ ಈಚಲು ಮಾರಗಳೂ ಇಲ್ಲ, ಅಬ್ಯಾರಿ ಇಲಾಖೆಯ ಯಾವುದೇ ಹಿಡಿತವೂ ಅವುಗಳ ಮೇಲೆ ಇಲ್ಲ. ಹಾಗಾಗಿ ಇವು ಬಗರ್ ಹುಕುಂ ಸಾಗುವಳಿ ಆಗುತ್ತಲೇ ಬಂದಿವೆ. ಎಲ್ಲಾ ಜಿಲ್ಲೆಗಳಲ್ಲೂ ಈ ರೀತಿ ಆಗುತ್ತಿದೆ. ಅದೇರೀತಿ ತುಮಕೂರು ಜಿಲ್ಲೆಯಲ್ಲಿ ಕಳ್ಳಂಬೆಳ್ಳದಲ್ಲೂ ಸೇರಿ ಒಟ್ಟು ಸುಮಾರು 21 ಸಾವಿರ ಎಕರೆ ಜಮೀನು ಈಗಾಗಲೇ ಬಗರ್ ಹುಕುಂ ಸಾಗುವಳಿಯಾಗಿದೆ. ಆದರೆ ಇದರ ರೆಗ್ಯೂಲರೈಸ್ ಹೇಗೆ ಮಾಡಬೇಕು, ಯಾವ ಆಧಾರದ ಮೇಲೆ ಮಾಡಬೇಕು ಎನ್ನುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕಳೆದ 20 ವರ್ಷಗಳಿಂದಲೂ ಈ ಅನಧಿಕೃತ ಸಾಗುವಳಿ ನಡೆದಿದೆ. ಜಮೀನನ್ನು ಹೀಗೆ ಖಾಲಿ ಬಿಟ್ಟರೆ ಅದು ಇನ್ನೂ 20 ವರ್ಷಗಳವರೆಗೆ ನಡೆದುಕೊಂಡು ಹೋಗುತ್ತದೆ. ನಾನು ನೀವು ಹೇಳಿದ್ದನ್ನು ಒಪ್ಪುತ್ತೇನೆ. ಇದನ್ನು ಯಾವ ಕಂಡೀಷನ್ ಮೇಲೆ ರೆಗ್ಯೂಲರೈಸ್ ಮಾಡಬೇಕು ಎಂಬ ಬಗ್ಗೆ ಪರಿಶೀಲಿಸಲು ಸಚಿವ ಸಂಪುಟದ ಉಪ ಸಮಿತಿಗೆ ರೆಫರ್ ಮಾಡಿದ್ದೇವೆ. ಸಬ್ ಕಮಿಟಿಗೆ ಎರಡು ವರ್ಷಗಳ ಹಿಂದೆ ಇದನ್ನು ರೆಫರ್ ಮಾಡಿಲ್ಲ, ಇತ್ತೀಚೆಗೆ ತಾನೇ ಅದು ಸಬ್ ಕಮಿಟಿಗೆ ರೆಫರ್ ಆಗಿದೆ. ಆದಷ್ಟು ಬೇಗ ಅದನ್ನು ಪರಿಶೀಲಿಸುತ್ತೇವೆ.

ಪರಿಶೀಲಿಸುತ್ತೇವೆ ಎಂದರೆ ಏನು ಎಂದು ನಿಮಗೆ ಗೊತ್ತಿದೆಯಲ್ವೇ? ಹೌಸ್ ಆಫ್ ಕಾಮನ್ಸ್‌ನ ಉತ್ತರ ಹೇಳುವಾಗ ಒಂದು ಸಾರಿ It is under consideration ಎಂದು ಹೇಳಿದರು. ನೆಕ್ಸ್ ಟೈಮ್ ಹೇಳಿದಾಗ It is under active consideration ಎಂದು ಹೇಳಿದರು. Sir, what is th difference between consideration and active consideration? ಎಂದು ಕೇಳಿದಾ ಅವರು ಹೇಳಿದರು, When I say consideration the file is not there, when I say it i under active consideration, atleast the file is alive ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳೇ, ತಮ್ಮ ಉತ್ತರವನ್ನು ನಾವ ಏನೆಂದು ತಿಳಿದುಕೊಳ್ಳಬೇಕು. ಅದನ್ನು under active consideration ಎಂದು ತಿಳಿದುಕೊಳ್ಳಬೇಕೊ ಅಥವಾ Under consideration ಎಂದು ತಿಳಿದುಕೊಳ್ಳಬೇಕೋ? ಇದರ ಬಗ್ಗೆ ಏನು ಫೈಲ ಇದೆಯೋ, ಇಲ್ಲವೋ?

SRI J.H. PATEL : It is under active consideration. ಅದಕ್ಕೆ ಏನಾದರೂ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಸಲಹೆ ಏನೆಂದರೆ, ಎಕ್ಸೈಜ್ ಡಿಪಾರ್ಟ್‌ಮೆಂಟ್‌ನಿಂದ ಈ ಲ್ಯಾಂಡ್ ಅನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಬೇಕು. ಈ ಬಗರ್ ಹುಕುಂ ರೆಗ್ಯೂಲರೈಸೇಷನ್‌ಗೆ ಅಮೆಂಡ್‌ಮೆಂಟ್ ಅನ್ನು ನಾವು ಈಗಾಗಲೇ 1992ರಲ್ಲೇ ತಂದಿದ್ದೇವೆ ಅದರ ಪ್ರಕಾರ ಇದು ರೆಗ್ಯೂಲರೈಸ್ ಆಗುತ್ತದೆ. ಆದರೆ ಇಲ್ಲಿ ಟ್ರಾನ್ಸ್‌ಫರ್ ಮಾಡುತ್ತಿಲ್ಲ. ಈ ರೀತಿ ಇದೊಂದು ಕಡೆ ಮಾತ್ರ ಇಲ್ಲ. ದಕ್ಷಿಣ ಕನ್ನಡ, ಶಿವಮೊಗ್ಗ ಜಿಲ್ಲೆಗಳಲ್ಲಿ, ಕುಮುಟಾ ಮುಂತಾದೆಡೆ ಕೂಡ ಇದೇ ರೀತಿ ಆಗಿದೆ. ಲ್ಯಾಂಡ್ ಟ್ರಾನ್ಸ್‌ಫರ್ ಮಾಡಿದರೆ ಸುಲಭವಾಗಿ ರೆಗ್ಯುಲರೈಸ್ ಮಾಡುವುದಕ್ಕಾಗುತ್ತದೆ. ಈ ರೀತಿ ರಾಜ್ಯಾದ್ಯಂತ ಇಲ್ಲ. ಪರ್ಟಿಕ್ಯುಲರ್ಲಿ ತುಮಕೂರು, ಚಿತ್ರದುರ್ಗ, ಕೋಲಾರ, ಬಳ್ಳಾರಿ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಮತ್ತು ಉಳಿದೆಡೆ ಒಂದೆರೆಡು ತಾಲ್ಲೂಕುಗಳಲ್ಲಿ ಈ ರೀತಿ ಇರಬಹುದು. ಆದರೆ ತುಮಕೂರಿನಲ್ಲಿ ಹೆಚ್ಚಿನ ತಾಲ್ಲೂಕುಗಳಲ್ಲಿ ಈ ರೀತಿ ಇದೆ. ಕೇವಲ ಕೆಲವೇ ತಾಲ್ಲೂಕುಗಳಲ್ಲಿ ಮಾತ್ರ ಈ ರೀತಿ ಲ್ಯಾಂಡ್ ಹೊಡೆದಿದ್ದಾರೆ, ಲ್ಯಾಂಡ್ ಕೂಡ ಅವೈಲಬಲ್ ಇದೆ. ಇದನ್ನು ರೆಗ್ಯುಲರೈಸ್ ಮಾಡುವುದು ಬಹಳ ಕಷ್ಟದ ಕೆಲಸವೇನಲ್ಲ. ಈ ಬಗ್ಗೆ ಒಂದು ಸಚಿವ ಸಂಪುಟದಲ್ಲಿ ನಿರ್ಧಾರ ತೆಗೆದುಕೊಂಡು ಲ್ಯಾಂಡ್ ಟ್ರಾನ್ಸ್‌ಫರ್ ಮಾಡಿದರೆ ತಕ್ಷಣ ಅದನ್ನು ರೆಗ್ಯುಲರೈಸ್ ಮಾಡಲಿಕ್ಕೆ ಬರುತ್ತದೆ. Till then it should be stayed.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಗಳು ಈಗ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡುರುವುದರ ಬಗ್ಗೆ ಉತ್ತರ ಕೊಡುವುದರ ಜೊತೆಗೆ ನಾವೀಗ ಪ್ರಸ್ತಾಪ ಮಾಡುವುದರ ಬಗೆಗೂ ಉತ್ತರಿಸಬೇಕೆಂದು ಕೋರುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ ಉಪಸ್ಥಿತರಿರುವುದರಿಂದ ನಾನು ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿರುವ ಹಾಗೆ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನುಗಳನ್ನು ಖಾಯಂ ಮಾಡುವುದಕ್ಕೋಸ್ಕರ

ಅರಣ್ಯ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಗಳನ್ನು ಮಾಡಿದ್ದಾರೆ. ಈ ಸಮಿತಿಗೆ ಕೆಲವು ನಾಮಿನೇಷನ್ ಆಗಿಲ್ಲ ಎನ್ನುವ ಕಾರಣಕ್ಕೋಸ್ಕರ ಈ ಸಮಿತಿಗಳು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಇದರ ಪರಿಣಾಮವಾಗಿ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನು ಪ್ರತಿ ವರ್ಷ ಲೂಟಿಯಾಗುತ್ತಿದೆ. ಅದಕ್ಕೋಸ್ಕರ ದಯಮಾಡಿ ಈಗಲಾದರೂ ಆ ಸಮಿತಿ ಸಭೆ ಸೇರಿ ಈಗ ಮಾಡಿರುವಂತಹ ಅನ್‌ಆಥರೈಸ್ಡ್ ಕಲ್ಟಿವೇಷನ್ ಅನ್ನು ಕನ್‌ಫರ್ಮ್ ಮಾಡುವುದಕ್ಕೆ ಈ ಸಮಿತಿಯಲ್ಲಿ ಒಂದು ತೀರ್ಮಾನ ತೆಗೆದುಕೊಂಡರೆ ಬಹಳ ಒಳ್ಳೆಯದಾಗುತ್ತದೆ. ಲಕ್ಷಾಂತರ ಹಿಂದುಳಿದಿರುವ ಜನತೆಯ ಕುಟುಂಬ ವರ್ಗದವರಿಗೆ ಇದರಿಂದ ಅನುಕೂಲವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಮುಖ್ಯಮಂತ್ರಿಗಳು ಮೊದಲು Consideration ನಂತರ active consideration ಎಂದು ಹೇಳಿದರು. ಈ ಪ್ರಶ್ನೆ ವಿಧಾನ ಸಭೆಯಲ್ಲಿ ಆರನೇ ಬಾರಿಗೆ ಪ್ರಸ್ತಾಪವಾಗುತ್ತಿದೆ. ಈವರೆಗೆ ಎಲ್ಲಾ ಬಾರಿಯೂ. ಪರಿಶೀಲಿಸಲಾಗುತ್ತಿದೆ. ಎಂದೇ ಸರ್ಕಾರ ಉತ್ತರ ನೀಡಿದೆ. ಇನ್ನು ಮುಂದೆ ಆ ಉತ್ತರ ಕೊಡುವುದು ಬೇಡ. ದಯಮಾಡಿ ನಾವು ಆ ಕೆಲಸ ಮಾಡುತ್ತೇವೆ ಎನ್ನತಕ್ಕ ಮಾತನ್ನು ಸರ್ಕಾರ ಹೇಳಬೇಕು. ಟ್ರಾನ್ಸ್‌ಫರ್ ಮಾಡಿಕೊಡುತ್ತೇವೆ ಎನ್ನುವ ಭರವಸೆಯನ್ನು ಸರ್ಕಾರ ಕೊಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳು ಆಗಲೇ ತಮ್ಮ ಉತ್ತರವನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಒಟ್ಟು ಇದು ಯಾವ್ಯಾವ ಜಿಲ್ಲೆಯಲ್ಲಿ ಎಷ್ಟಿದೆ ಎಂಬುದನ್ನು ನೋಡಬೇಕು. ಬಡವರು ಯಾವುದೋ ಕಾರಣದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ. ಈಗ ಜಮೀನನ್ನು ಸರ್ಕಾರ ಅವರಿಂದ ಬಿಡಿಸಿಕೊಳ್ಳುವಂತಿಲ್ಲ. ನಾವೂ ಹೇಳಿ ಮಾಡಿಸಿದ್ದೇವೆ. ನೀವೂ ಹೇಳಿ ಮಾಡಿಸಿದ್ದೀರಿ. ಇದೆಲ್ಲಾ ನಡೆದಿದೆ. ಆದರೆ ಇಲ್ಲಿ ಪ್ರಶ್ನೆ ಇರುವುದು ಏನೆಂದರೆ, ಇದನ್ನು ಯಾವ ರೀತಿ ರೆಗ್ಯುಲರೈಸ್ ಮಾಡಬೇಕು ಎನ್ನುವುದು ಈಗ ಫಾರೆಸ್ಟ್‌ನವರು ಹಿಂದೆ ಎನ್‌ಕ್ರೋಚ್‌ಮೆಂಟ್ ಆಗಿದೆ, ಅಲ್ಲಿ ಫಾರೆಸ್ಟೂ ಇಲ್ಲ ಅಥವಾ ಅವರಿಗೆ ಅಲ್ಲಿ ಅಥಾರಿಟಿಯೂ ಕೂಡ ಇಲ್ಲ ಎನ್ನುವಂತಾಗಿದೆ. ಈ ಅನಾಮಲೀಸ್ ಏನಿದೆ, Anomalies in the situation, they have to be setright. ಈ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯೊಂದನ್ನು ರಚಿಸಿದ್ದೇವೆ. We will take a decision not only on your Taluk and District but about the State. About Forest clearance, I think it is a wider implication and it requires the Central Government's permission. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿಯೂ ಕೂಡ ಬೇಕಾಗುತ್ತದೆ. ಹೋದ ಸಾರಿ ನಡೆದ ಮಾನ್ಯ ಮುಖ್ಯಮಂತ್ರಿಗಳ ಕಾನ್ಫರೆನ್ಸ್‌ನಲ್ಲಿ This was one of my arguments before them. ಈಗ ನಾವು ಫಾರೆಸ್ಟ್ ಕ್ಲಿಯರೆನ್ಸ್ ಕೊಡಲಿಲ್ಲ ಎನ್ನುವ ಕಾರಣಕ್ಕೋಸ್ಕರ ಸಣ್ಣ ಪುಟ್ಟ ಮೈನಿಂಗ್ ಜಮೀನು ಇಲ್ಲದಿರುವವರು ಜಮೀನು ಮಾಡಿಕೊಂಡಿರುವುದಿಲ್ಲ. ಇದು ತೊಂದರೆಯಾಗುತ್ತದೆ. ಇದಕ್ಕೆ ಎಲ್ಲರಿಗೂ ಅನ್ವಯಿಸುವಂತೆ ನೀವು ಏನಾದರೂ ಒಂದು

ನ್ಯಾಷನಲ್ ಪಾಲಿಸಿ ಮಾಡಬೇಕು. ಈ ಫಾರೆಸ್ಟ್ ಎನ್ನುವುದು ಅಲ್ಲಿಯೂ ಹೋಗುವ ಹಾಗಿಲ್ಲ. ಎಲ್ಲಿಯೂ ಹೋಗುವ ಹಾಗಿಲ್ಲ. They have now realised the difficulty and they are going to find some kind of a solution at the national level.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, 27ನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 85 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ತೀರ್ಥಹಳ್ಳಿ ತಾಲ್ಲೂಕಿನ ನಾಗರೀಕರೊಬ್ಬರ ಅಕ್ರಮಬಂಧನ

2051 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನ ಮಳೂರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಒಬ್ಬರು ನಾಗರೀಕರೋಬ್ಬರ ಮೇಲೆ ಹಲ್ಲೆ ನಡೆಸಿ ಅಕ್ರಮ ಬಂಧನದಲ್ಲಿರಿಸಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಿಸಿದ ಮೊಕದ್ದಮೆಯ ತನಿಖೆಯು ಯಾವ ಹಂತದಲ್ಲಿದೆ?

ಆ) ಆ ಸಬ್‌ಇನ್ಸ್‌ಪೆಕ್ಟರ್‌ರವರ ಮೇಲೆ ಇಲಾಖಾ ಕ್ರಮ ಏನು ಕೈಗೊಳ್ಳಲಾಗಿದೆ?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ದಿನಾಂಕ : 23.4.97 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ತೀರ್ಥಹಳ್ಳಿ ತಾಲ್ಲೂಕಿನ ತೂದೂರು ಗ್ರಾಮದ ವಾಸಿ ಸತೀಶ್ ಕೂಮಾರ್ ಬಿನ್‌ತಿಮ್ಮನಾಯ್ಕ ಇವರ ಮನೆಗೆ ಮಳೂರು ಪೋಲೀಸ್ ಠಾಣೆಯ ಪಿಎಸ್‌ಐ ಆರ್. ನಾಗಣ್ಣಾ ಹಾಗೂ ಸಿಬ್ಬಂದಿಗಳಾದ ಶಾಂತಮಲ್ಲಪ್ಪ, ತಿಪ್ಪೇಸ್ವಾಮಿ ಮತ್ತು ಇನ್ನೊಬ್ಬರು ಹೋಗಿ ಮನೆಯಲ್ಲಿ ಮಲಗಿದ್ದ ಸತೀಶ್‌ಕುಮಾರ್ ರವರನ್ನು ಎಬ್ಬಿಸಿ, ಹೊರಗೆ ಕರೆದು ಅನಧಿಕೃತವಾಗಿ ವಾಟೆ ಹುಳಿ ದಾಸ್ತಾನು ಮಾಡಿದ ಬಗ್ಗೆ ವಿಚಾರಿಸಿ, ಅದನ್ನು ಪೋಲೀಸ್ ಠಾಣೆಗೆ ತಂದು ಕೊಡುವಂತೆ ಹೇಳಿ ಅವ್ಯಾಚ ಶಬ್ಧಗಳಿಂದ ಬೈದು, ದೊಣ್ಣೆಯಿಂದ ಹೊಡೆದಿದ್ದು ಅಲ್ಲದೇ ಸತೀಶ್ ಕುಮಾರ್‌ರವರನ್ನು ಹುಳಿ ಸಮೇತ ಠಾಣೆಗೆ ಕರೆದುಕೊಂಡು ಬಂದು, ಅವರಿಂದ ರೂ 1300.00 ಪಡೆದಿರುತ್ತಾರೆಂದು, ಸತೀಶ್‌ಕುಮಾರ್ ರವರು ನೀಡಿದ ದೂರಿನ ಮೇರೆಗೆ ಮಳೂರು ಪೋಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ : 27 : 97 ಕಲಂ 324, 504, 161 ಜೊತೆಗೆ 34 ಭಾ.ದಂ.ಸಂ. ರೀತ್ಯಾ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ. ಸದರಿ ಪ್ರಕರಣದ ತನಿಖೆಯನ್ನು ಸಿಪಿಐ ತೀರ್ಥಹಳ್ಳಿರವರು ಕೈಗೊಂಡಿದ್ದು, ಸದರಿ ಪ್ರಕರಣದ ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿದ್ದು, ತನಿಖೆಯು ಪೂರ್ಣಗೊಂಡಿದ್ದು, ಪ್ರಕರಣದಲ್ಲಿನ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸುವ ಬಗ್ಗೆ ಸಹಾಯಕ ಅಭಿಯೋಜಕ ನಿರ್ದೇಶಕರು,